# ರಜಬ್ ತಿಂಗಳಲ್ಲಿ ಉಪವಾಸ ಆಚರಿಸುವುದು

الصوم في شهر رجب

< الكنادي >

ಶೈಖ್ ಮುಹಮ್ಮದ್ ಇಬ್ನ್ ಸಾಲಿಹ್ ಅಲ್‌ಮುನಜ್ಜಿದ್

الشيخ محمد بن صالح المنجد

ಅನುವಾದ: ಮುಹಮ್ಮದ್ ಹಂಝಾ ಪುತ್ತೂರು
ಪರಿಶೀಲನೆ: ಅಬೂಬಕರ್ ನಝೀರ್ ಸಲಫಿ

ترجمة: محمد حمزة البتوري
مراجعة: أبو بكر نذير السلفي

# ರಜಬ್ ತಿಂಗಳಲ್ಲಿ ಉಪವಾಸ ಆಚರಿಸುವುದು

ಪ್ರಶ್ನೆ: ರಜಬ್ ತಿಂಗಳಲ್ಲಿ ಉಪವಾಸ ಆಚರಿಸುವುದಕ್ಕೆ ನಿರ್ದಿಷ್ಟ ಶ್ರೇಷ್ಠತೆಯಿಂದೆಯೆಂಬ ಯಾವುದಾದರೂ ಹದೀಸ್ ಇದೆಯೇ?

ಉತ್ತರ: ಸರ್ವಸ್ತುತಿಗಳು ಅಲ್ಲಾಹನಿಗೆ ಮಾತ್ರ ಮೀಸಲು.

**ಮೊದಲನೆಯದಾಗಿ,**

ರಜಬ್ ತಿಂಗಳ ಪವಿತ್ರ ತಿಂಗಳುಗಳಲ್ಲೊಂದು. ಪವಿತ್ರ ತಿಂಗಳುಗಳ ಬಗ್ಗೆ ಅಲ್ಲಾಹು ಹೇಳುತ್ತಾನೆ:

﴿ إِنَّ عِدَّةَ ٱلشُّهُورِ عِندَ ٱللَّهِ ٱثۡنَا عَشَرَ شَهۡرٗا فِي كِتَٰبِ ٱللَّهِ يَوۡمَ خَلَقَ ٱلسَّمَٰوَٰتِ وَٱلۡأَرۡضَ مِنۡهَآ أَرۡبَعَةٌ حُرُمٞۚ ﴾ [التوبة: 36] .

"ಖಂಡಿತವಾಗಿಯೂ ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದ ದಿನದಂದು ಅಲ್ಲಾಹು ದಾಖಲಿಸಿರುವ ಪ್ರಕಾರ ಅಲ್ಲಾಹನ ಬಳಿ ತಿಂಗಳುಗಳ ಸಂಖ್ಯೆ ಹನ್ನೆರಡು. ಅವುಗಳ ಪೈಕಿ ನಾಲ್ಕು ಪವಿತ್ರ ತಿಂಗಳುಗಳು. ಅದೇ ನೇರವಾದ ಧರ್ಮ. ಆದ್ದರಿಂದ ಆ ತಿಂಗಳುಗಳಲ್ಲಿ ನೀವು ನಿಮ್ಮ ಮೇಲೆಯೇ ಅನ್ಯಾಯವೆಸಗಬಾರದು..." [ಕುರ್‌ಆನ್ 9:36]

ಆ ನಾಲ್ಕು ಪವಿತ್ರ ತಿಂಗಳುಗಳು: ರಜಬ್, ದುಲ್‌ಕಅ್‌ದಃ, ದುಲ್‌ಹಿಜ್ಜಃ ಮತ್ತು ಮುಹರ್ರಮ್.

ಅಬೂ ಬಕ್ರಃ(ﷺ)ರಿಂದ ವರದಿಯಾದ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

قال رَسُول اللَّهِ ﷺ: { السَّنَةُ اثْنَا عَشَرَ شَهْرًا، مِنْهَا أَرْبَعَةٌ حُرُمٌ، ثَلَاثَةٌ مُتَوَالِيَاتٌ، ذُو الْقَعْدَةِ وَذُو الْحِجَّةِ وَالْمُحَرَّمُ وَرَجَبُ مُضَرَ الَّذِي بَيْنَ جُمَادَى وَشَعْبَانَ } مُتَّفَقٌ عَلَيهِ.

"ವರ್ಷವು ಹನ್ನೆರಡು ತಿಂಗಳುಗಳಾಗಿವೆ. ಅವುಗಳಲ್ಲಿ ನಾಲ್ಕು ತಿಂಗಳುಗಳು ಶ್ರೇಷ್ಠವಾದುದು. ಮೂರು ಒಂದರ ನಂತರ ಒಂದರಂತೆ ಬರುವ ತಿಂಗಳುಗಳು. ದುಲ್‌ಕಅ್‌ದಃ, ದುಲ್‌ಹಿಜ್ಜಃ, ಮುಹರ್ರಮ್ ಮತ್ತು ಜುಮಾದಾ ಹಾಗೂ ಶಅ್‌ಬಾನ್ ತಿಂಗಳುಗಳ ನಡುವೆ ಬರುವ ಮುದರ್ ಗೋತ್ರದವರ ರಜಬ್ ತಿಂಗಳು." [ಅಲ್‌ಬುಖಾರಿ 4662 ಮತ್ತು ಮುಸ್ಲಿಮ್ 1679]

ಈ ನಾಲ್ಕು ತಿಂಗಳುಗಳನ್ನು ಎರಡು ಕಾರಣಗಳಿಂದಾಗಿ ಪವಿತ್ರವೆಂದು ಘೋಷಿಸಲಾಗಿದೆ.

ಒಂದು: ಆ ತಿಂಗಳುಗಳಲ್ಲಿ ಯುದ್ಧ ಮಾಡುವುದು ನಿಷಿದ್ಧ. ಆದರೆ ಶತ್ರುಗಳೇ ಮುಂದಾಗಿ ಯುದ್ಧಕ್ಕೆ ಬಂದರೆ ಯುದ್ಧ ಮಾಡಬಹುದು.

ಎರಡು: ಆ ತಿಂಗಳುಗಳಲ್ಲಿ ನಿಷಿದ್ಧ ಕೃತ್ಯಗಳನ್ನು ಮಾಡುವುದು ಇತರ ತಿಂಗಳುಗಳಲ್ಲಿ ಮಾಡುವುದಕ್ಕಿಂತಲೂ ಘೋರ.

ಈ ಕಾರಣದಿಂದಲೇ ಆ ತಿಂಗಳುಗಳಲ್ಲಿ ಪಾಪಕೃತ್ಯಗಳನ್ನು ಮಾಡಬಾರದೆಂದು ಅಲ್ಲಾಹು ಹೇಳಿದ್ದಾನೆ:

﴿ فَلَا تَظۡلِمُواْ فِيهِنَّ أَنفُسَكُمۡۚ ﴾ [التوبة: 36] .

"ಆದ್ದರಿಂದ ಆ ತಿಂಗಳುಗಳಲ್ಲಿ ನೀವು ನಿಮ್ಮ ಮೇಲೆಯೇ ಅನ್ಯಾಯವೆಸಗಬಾರದು..." [ಕುರ್‌ಆನ್ 9:36[

ನಿಷಿದ್ಧ ಕೃತ್ಯಗಳನ್ನು ಮಾಡುವುದು ಈ ತಿಂಗಳುಗಳಲ್ಲೂ, ಇತರ ತಿಂಗಳುಗಳಲ್ಲೂ ನಿಷಿದ್ಧವಾಗಿದ್ದರೂ ಸಹ, ಈ ತಿಂಗಳುಗಳಲ್ಲಿ ಅವುಗಳನ್ನು ಮಾಡುವುದು ಕಡು ನಿಷಿದ್ಧ.

ಅಸ್ಸಅ್‌ದೀ(ﷺ) ಹೇಳುತ್ತಾರೆ:

"ಆದ್ದರಿಂದ ಆ ತಿಂಗಳುಗಳಲ್ಲಿ ನೀವು ನಿಮ್ಮ ಮೇಲೆಯೇ ಅನ್ಯಾಯವೆಸಗಬಾರದು..." ಆ ತಿಂಗಳುಗಳಲ್ಲಿ ಎಂಬುದು ಬಹುಶಃ ವರ್ಷದ ಹನ್ನೆರಡು ತಿಂಗಳುಗಳಲ್ಲಿ ಎಂದಾಗಿರಬಹುದು. ಅಲ್ಲಾಹು ತಿಂಗಳುಗಳನ್ನು ಮಾಡಿರುವುದು ಜನರು ಕಾಲವನ್ನು ಲೆಕ್ಕ ಮಾಡಲು ಮತ್ತು ಅಲ್ಲಾಹನ ಆಜ್ಞಾಪಾಲನೆ ಮಾಡುತ್ತಾ ಅವುಗಳನ್ನು ವ್ಯಯಿಸಲು ಹಾಗೂ ಅಲ್ಲಾಹನ ಅನುಗ್ರಹಗಳಿಗಾಗಿ ಅವನಿಗೆ ಕೃತಜ್ಞತೆ ಸಲ್ಲಿಸುತ್ತಾ ಜೀವಿಸಲು ಆಗಿದೆ. ಆದ್ದರಿಂದ ಅವುಗಳಲ್ಲಿ ಅನ್ಯಾಯವೆಸಗುವುದರ ಬಗ್ಗೆ ಎಚ್ಚರ ವಹಿಸಿರಿ ಎಂದು ಅಲ್ಲಾಹು ಹೇಳುತ್ತಿದ್ದಾನೆ .

ಅಥವಾ ಆ ತಿಂಗಳುಗಳಲ್ಲಿ ಎಂಬುದರ ಉದ್ದೇಶ ಪವಿತ್ರವಾದ ನಾಲ್ಕು ತಿಂಗಳುಗಳಾಗಿರಬಹುದು. ಹಾಗಾದರೆ ಈ ನಾಲ್ಕು ತಿಂಗಳುಗಳಲ್ಲಿ ಅನ್ಯಾಯವೆಸಗಬಾರದೆಂದು ಅಲ್ಲಾಹು ಪ್ರತ್ಯೇಕವಾಗಿ ಹೇಳಿದಂತಾಗಿದೆ. ಯಾಕೆಂದರೆ ಇತರ ತಿಂಗಳುಗಳಲ್ಲೂ ಅನ್ಯಾಯವೆಸಗುವುದು ನಿಷಿದ್ಧವಾಗಿದೆ. ಆದರೆ ಈ ನಾಲ್ಕು ತಿಂಗಳುಗಳು ಪವಿತ್ರವಾಗಿರುವುದರಿಂದ ಅವುಗಳಲ್ಲಿ ಅನ್ಯಾಯವೆಸಗುವುದು ಇತರ ತಿಂಗಳುಗಳಲ್ಲಿ ಅನ್ಯಾಯವೆಸಗುವುದಕ್ಕಿಂತಲೂ ಘೋರ ಅಪರಾಧವಾಗಿದೆ." [ತಫ್ಸೀರು ಸ್ಸಅ್‌ದೀ ಪುಟ 373]

**ಎರಡನೆಯದಾಗಿ,**

ರಜಬ್ ತಿಂಗಳಲ್ಲಿ ಉಪವಾಸ ಆಚರಿಸುವುದು:

ರಜಬ್ ತಿಂಗಳಲ್ಲಿ ಉಪವಾಸ ಆಚರಿಸುವುದರ ಬಗ್ಗೆ ಹೇಳುವುದಾದರೆ ಆ ಬಗ್ಗೆ ಯಾವುದೇ ಹದೀಸ್ ಸಹೀಹಾಗಿ ವರದಿಯಾಗಿಲ್ಲ.

ಕೆಲವು ಜನರು ಕೆಲವು ದಿನಗಳಿಗೆ ಇತರ ದಿನಗಳಿಗಿಂತ ಹೆಚ್ಚು ಪ್ರಾಮುಖ್ಯತೆ ನೀಡಿ ಅವುಗಳಲ್ಲಿ ಉಪವಾಸ ಆಚರಿಸುವುದು ಶ್ರೇಷ್ಠಕರವಾಗಿದೆಯೆಂದು ಹೇಳುವುದಕ್ಕೆ ಶರೀಅತ್ತಿನಲ್ಲಿ ಯಾವುದೇ ಪುರಾವೆಯಿಲ್ಲ.

ಆದರೆ ಪವಿತ್ರ ತಿಂಗಳುಗಳಲ್ಲಿ (ರಜಬ್ ತಿಂಗಳು ಪವಿತ್ರ ತಿಂಗಳುಗಳಲ್ಲಿ ಸೇರಿದ ಒಂದು ತಿಂಗಳು) ಉಪವಾಸ ಆಚರಿಸುವುದು ಶ್ರೇಷ್ಠಕರವೆಂದು ಹೇಳುವ ಒಂದು ಹದೀಸ್ ವರದಿಯಾಗಿದೆ. ಆ ಹದೀಸಿನಲ್ಲಿರುವಂತೆ ಪ್ರವಾದಿ(ﷺ)ರವರು ಹೇಳುತ್ತಾರೆ:

{ صُمْ مِنَ الْحُرُمِ وَاتْرُكْ } رواه أبو داود.

"ಪವಿತ್ರ ತಿಂಗಳುಗಳಲ್ಲಿ ಉಪವಾಸ ಆಚರಿಸಿರಿ ಮತ್ತು ಆಚರಿಸದೆಯೂ ಇರಿ." [ಅಬೂದಾವೂದ್ 2428]

ಆದರೆ ಈ ಹದೀಸ್ ದುರ್ಬಲವಾಗಿದೆ. ಶೈಖ್ ಅಲ್‌ಅಲ್ಬಾನೀ ದಈಫ್ ಅಬೀ ದಾವೂದ್ ಎಂಬ ಗ್ರಂಥದಲ್ಲಿ ಇದನ್ನು ದುರ್ಬಲವೆಂದು ಹೇಳಿದ್ದಾರೆ.

ಇನ್ನು ಈ ಹದೀಸ್ ಸಹೀಹ್ ಆಗಿದ್ದರೂ ಪವಿತ್ರ ತಿಂಗಳುಗಳಲ್ಲಿ ಉಪವಾಸ ಆಚರಿಸುವುದು ಪ್ರೋತ್ಸಾಹನೀಯವೆಂದು ಇದು ಸೂಚಿಸುವುದಿಲ್ಲ. ಯಾರಾದರೂ ರಜಬ್ ತಿಂಗಳಲ್ಲೂ ಇತರ ಪವಿತ್ರ ತಿಂಗಳುಗಳಲ್ಲೂ ಉಪವಾಸ ಆಚರಿಸುವುದಾದರೆ ಅದರಲ್ಲಿ ತೊಂದರೆಯಿಲ್ಲ. ಆದರೆ ರಜಬ್ ತಿಂಗಳಲ್ಲಿ ಮಾತ್ರ ಉಪವಾಸ ಆಚರಿಸುವುದಾದರೆ ಅದು ತಪ್ಪು.

ಶೈಖುಲ್ ಇಸ್ಲಾಮ್ ಇಬ್ನ್ ತೈಮಿಯ್ಯಃ ತಮ್ಮ ಮಜ್ಮೂಉಲ್ ಫತಾವಾ ಎಂಬ ಗ್ರಂಥದಲ್ಲಿ (25/290) ಹೇಳುತ್ತಾರೆ:

"ರಜಬ್ ತಿಂಗಳಲ್ಲಿ ಮಾತ್ರ ವಿಶೇಷವಾಗಿ ಉಪವಾಸ ಆಚರಿಸುವುದಾದರೆ ಆ ಬಗ್ಗೆ ವರದಿಯಾದ ಹದೀಸ್‌ಗಳೆಲ್ಲವೂ ದುರ್ಬಲ. ಮಾತ್ರವಲ್ಲ ಕೃತಕ ಕೂಡ. ವಿದ್ವಾಂಸರಲ್ಲಿ ಯಾರೂ ಕೂಡ ಆ ಹದೀಸ್‌ಗಳನ್ನು ಅವಲಂಬಿಸಿಲ್ಲ. ಆ ಹದೀಸ್‌ಗಳು ಕರ್ಮ ಶ್ರೇಷ್ಠತೆಗಳ ಬಗ್ಗೆಯಿರುವ ದುರ್ಬಲ ಹದೀಸ್‌ಗಳಲ್ಲ; ಬದಲಾಗಿ ಸುಳ್ಳು ಸುಳ್ಳಾಗಿ ನಿರ್ಮಿಸಲ್ಪಟ್ಟ ಹದೀಸ್‌ಗಳಾಗಿವೆ. ಮುಸ್ನದ್ ಅಹ್ಮದ್ ಮತ್ತಿತರ ಹದೀಸ್ ಗ್ರಂಥಗಳಲ್ಲಿ ಒಂದು ಹದೀಸಿದೆ. ಆ ಹದೀಸಿನಲ್ಲಿ ಪ್ರವಾದಿ(ﷺ)ರವರು ಪವಿತ್ರ ತಿಂಗಳುಗಳಲ್ಲಿ ಉಪವಾಸ ಆಚರಿಸುವಂತೆ ಹೇಳುತ್ತಾರೆ. ಪವಿತ್ರ ತಿಂಗಳುಗಳೆಂದರೆ ರಜಬ್, ದುಲ್‌ಕಅ್‌ದಃ, ದುಲ್ ಹಿಜ್ಜಃ ಮತ್ತು ಮುಹರ್ರಮ್. ಆದ್ದರಿಂದ ಈ ಹದೀಸಿನ ಪ್ರಕಾರ ಈ ಎಲ್ಲ ತಿಂಗಳುಗಳಲ್ಲೂ ಉಪವಾಸ ಆಚರಿಸಬೇಕು. ಕೇವಲ ರಜಬ್ ತಿಂಗಳಲ್ಲಿ ಮಾತ್ರವಲ್ಲ."

ಇಬ್ನುಲ್ ಕಯ್ಯಿಮ್ ಹೇಳುತ್ತಾರೆ :

“ರಜಬ್ ತಿಂಗಳಲ್ಲಿ ಉಪವಾಸ ಆಚರಿಸುವ ಬಗ್ಗೆ ಮತ್ತು ಆ ತಿಂಗಳ ಕೆಲವು ರಾತ್ರಿಗಳಲ್ಲಿ ನಮಾಝ್ ಮಾಡುವ ಬಗ್ಗೆ ವರದಿಯಾದ ಹದೀಸ್‌ಗಳೆಲ್ಲವೂ ಸುಳ್ಳು ಮತ್ತು ಕೃತಕವಾಗಿ ಹೆಣೆದ ಹದೀಸ್‌ಗಳು.” [ಅಲ್‌ಮನಾರುಲ್ ಮುನೀಫ್ ಪುಟ 96]

ಹಾಫಿಝ್ ಇಬ್ನ್ ರಜಬ್ ತಮ್ಮ ‘ತಬ್ಯೀನುಲ್ ಅಜಬ್’ ಎಂಬ ಗ್ರಂಥದಲ್ಲಿ (ಪುಟ 11) ಹೇಳುತ್ತಾರೆ:

“ರಜಬ್ ತಿಂಗಳ ಶ್ರೇಷ್ಠತೆಯ ಬಗ್ಗೆ, ಅಥವಾ ಆ ತಿಂಗಳಲ್ಲಿ ಉಪವಾಸ ಆಚರಿಸುವ ಬಗ್ಗೆ, ಅಥವಾ ಆ ತಿಂಗಳ ನಿರ್ದಿಷ್ಟ ದಿನಗಳಲ್ಲಿ ಉಪವಾಸ ಆಚರಿಸುವ ಬಗ್ಗೆ, ಅಥವಾ ಆ ತಿಂಗಳ ಯಾವುದಾದರೂ ರಾತ್ರಿಯಲ್ಲಿ ವಿಶೇಷವಾಗಿ ನಮಾಝ್ ನಿರ್ವಹಿಸುವ ಬಗ್ಗೆ ಪುರಾವೆಗೆ ಯೋಗ್ಯವಾದ ಯಾವುದೇ ಹದೀಸ್ ಸಹೀಹಾಗಿ ವರದಿಯಾಗಿಲ್ಲ.”

ಶೈಖ್ ಸಯ್ಯಿದ್ ಸಾಬಿಕ್ ತಮ್ಮ ಫಿಕ್‌ಹು ಸ್ಸುನ್ನಃದಲ್ಲಿ (1/383) ಹೇಳುತ್ತಾರೆ:

“ರಜಬ್ ತಿಂಗಳಲ್ಲಿ ಆಚರಿಸುವ ಉಪವಾಸಕ್ಕೆ ಇತರ ತಿಂಗಳುಗಳಲ್ಲಿ ಆಚರಿಸುವ ಉಪವಾಸಕ್ಕಿಂತ ಹೆಚ್ಚಿನ ಶ್ರೇಷ್ಠತೆಯೇನೂ ಇಲ್ಲ. ಆ ತಿಂಗಳು ಪವಿತ್ರ ತಿಂಗಳುಗಳಲ್ಲಿ ಸೇರಿದ್ದಾಗಿದ್ದೂ ಸಹ. ಆ ತಿಂಗಳಲ್ಲಿ ಆಚರಿಸುವ ಉಪವಾಸಕ್ಕೆ ಪ್ರತ್ಯೇಕ ಶ್ರೇಷ್ಠತೆಯಿದೆಯೆಂದು ಯಾವುದೇ ಸಹೀಹಾದ ಹದೀಸಿನಲ್ಲೂ ಬಂದಿಲ್ಲ. ಬಂದಿರುವ ಹದೀಸ್‌ಗಳೆಲ್ಲವೂ ಪುರಾವೆಗೆ ಯೋಗ್ಯವಲ್ಲದ ಹದೀಸ್‌ಗಳು”.

ರಜಬ್ ತಿಂಗಳ 27ನೇ ದಿನದಂದು ಉಪವಾಸ ಆಚರಿಸುವ ಬಗ್ಗೆ ಶೈಖ್ ಇಬ್ನ್ ಉಸೈಮೀನ್‌ರೊಂದಿಗೆ ಕೇಳಲಾದಾಗ ಅವರು ಹೇಳಿದರು:

“ರಜಬ್ ತಿಂಗಳ 27ನೇ ದಿನ ಪ್ರತ್ಯೇಕವಾಗಿ ಉಪವಾಸ ಆಚರಿಸುವುದು ಮತ್ತು ಆ ರಾತ್ರಿ ಪ್ರತ್ಯೇಕವಾಗಿ ನಮಾಝ್ ಮಾಡುವುದು ಬಿದ್‌ಅತ್. ಎಲ್ಲ ಬಿದ್‌ಅತ್‌ಗಳೂ ಪಥಭ್ರಷ್ಟತೆಯಾಗಿವೆ.” [ಮಜ್ಮೂಉ ಫತಾವಾ ಇಬ್ನ್ ಉಸೈಮೀನ್ 20/440]

وَصَلَّى اللهُ وَسَلَّمَ عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********

IslamHouse.com